4

ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 03.03.2026
ಪಾಟೀಸವಾಲು ಆರೋಪಿ ಪರ ಶ್ರೀ ಎಂ ಕೆ ಎಸ ವಕೀಲರಿಂದಃ

ನಾನು ಪಿರ್ಯಾದಿದಾರ ಸಂಸ್ಥೆಯಲ್ಲಿ ಸಹಾಯಕ ವ್ಯವಸ್ಥಾಪಕರಾಗಿ ಎಂದು ಕೆಲಸ ಮಾಡುತ್ತಿದ್ದೇನೆ. ವ್ಯವಸ್ಥಾಪಕರಾಗಿ ನೇತ್ರಾವತಿ ರವರು ಇರುತ್ತಾರೆ. ನಾನು ಸಹಾಯಕ ವ್ಯವಸ್ಥಾಪಕರಾಗಿ ಒಂದು ವರ್ಷ ಐದು ತಿಂಗಳಿನಿಂದ ಕೆಲಸ ಮಾಡುತ್ತಿದ್ದೇನೆ. ಸದರಿ ಬ್ಯಾಂಕನಲ್ಲಿ ಒಂದು ವರ್ಷ ಐದು ತಿಂಗಳ ಹಿಂದೆ ಆದಂತಹ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ದೂರನ್ನು ಜಯಶ್ರೀರವರು ವ್ಯವಸ್ಥಾಪಕರಾಗಿದ್ದಾಗ ಮಾಡಿರುತ್ತಾರೆ. ಜಯಶ್ರೀರವರಿಗೆ ನೀಡಿದ ಅಧಿಕಾರ ಪತ್ರವನ್ನು ಪ್ರಕರಣದಲ್ಲಿ ಹಾಜರುಪಡಿಸಿರುತ್ತಾರೆ. ಸದರಿ ದೂರನ್ನು ದಿನಾಂಕ 26.03.2018 ರಂದು ಸಲ್ಲಿಸಿರುತ್ತಾರೆ. ಈ ದೂರನ್ನು ಆರೋಪಿಯು ನಮ್ಮ ಬ್ಯಾಂಕನಿಂದ ಪಡೆದ ಸಾಲದ ಮರುಪಾವತಿಗಾಗಿ ನೀಡಿದ ಚೆಕ್ ಅಮಾನ್ಯವಾದ್ದರಿಂದ ಸಲ್ಲಿಸಿರುತ್ತೇವೆ. ಆರೋಪಿಯು ಯಾವ ಉದ್ದೇಶಕ್ಕಾಗಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರ ವೈಯಕ್ತಿಕ ಅಡಚಣೆಗಾಗಿ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಅವರ ವೈಯಕ್ತಿಕ ಅಡಚಣೆ ಎಂದು ತಿಳಿಸಿರುತ್ತಾರೆ ಏನು ಎಂದು ಹೇಳಿರುವುದಿಲ್ಲಾ. ಯಾವುದೇ ದಾಖಲಾತಿ ಪಡೆಯದೆ ವೈಯಕ್ತಿಕ ಸಾಲ ನೀಡುತ್ತಿರಾ ಎಂದರೆ ಸಾಕ್ಷಿಯು ಸಾಲದ ಅರ್ಜಿ , ಜಾಮೀನುದಾರರ ಸಹಿ ,ಸಾಲಗಾರರ ಆಧಾರ ಕಾರ್ಡ ಗಳನ್ನು ಪಡೆಯುತ್ತೇವೆ. ಮೇಲ್ಕಂಡ ದಾಖಲಾತಿಗಳನ್ನು ಹೊರತುಪಡಿಸಿ ಬೇರೆ ದಾಖಲಾತಿಗಳನ್ನು ಪಡೆಯುವುದಿಲ್ಲ. ನನ್ನಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆಧಾರ ಕಾರ್ಡನ್ನು ಮಾತ್ರ ಪಡೆಯುತ್ತೇವೆ ಎಂದು ಹೇಳಿ ಬರೆಸಿರುತ್ತೇನೆ. ನನ್ನಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆರೋಪಿಯೆ ಸಾಲ ಪಡೆದಿರುತ್ತಾರೆ ಎಂದು ಹೇಳಿರುತ್ತಿರಾ ಎಂದರೆ ಸಾಕ್ಷಿಯು ಜಿ ವಿನೋದರಾಜ ರವರು ಸಾಲ ಪಡೆದಿದ್ದು ಜಿ ವೀರೇಶ ಮತ್ತು ಜಿ ಪದ್ಮಾರವರು ಜಾಮೀನುದಾರಾಗಿ ಸಹಿ ಮಾಡಿರುತ್ತಾರೆ ಎಂದು ಹೇಳಿ ಬರೆಸಿರುತ್ತೆನೆ ಎಂದು ನುಡಿದಿರುತ್ತಾರೆ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಜಿ ವಿನೋದರಾಜ ರವರ ಹೆಸರು ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಚಾರ ನನಗೆ ಮಾಹಿತಿ ಇಲ್ಲದೆ ಇದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಲಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಯಾವ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ನೋಡಿರುತ್ತೇನೆ. ಯಾವೆಲ್ಲ ದಾಖಲಾತಿಗಳು ಎಂದು ಹೇಳಲು ಬರುವುದಿಲ್ಲ. ರೂ ಒಂದು ಲಕ್ಷ ಸಾಲ ಪಡೆದಿರುತ್ತಾರೆ. ಸಾಲದ ಹಣದ ಪೈಕಿ ಎಷ್ಟು ಹಣ ಪಾವತಿ ಮಾಡಿದ್ದಾರೆಎಂದು ನನಗೆ ಗೊತ್ತಿಲ್ಲ. ಎಷ್ಟು ಹಣ ಪಾವತಿ ಮಾಡಿದ್ದಾರೆ ಎಷ್ಟು ಹಣ ಬಾಕಿ ಇದೆ ಎಂದು ತೋರಿಸಲು ಖಾತೆಯ ವಹಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಲದ ಹಣವನ್ನು ಒಂದು ವರ್ಷದ ಒಳಗೆ ಪಾವತಿ ಮಾಡುವ ಷರತ್ತಿಗೆ ಒಳಪಟ್ಟು ಸಾಲ ನೀಡಿರುತ್ತೇವೆ. ಸದರಿ ಹಣವನ್ನು ಪಿಗ್ಮಿ ಮೂಲಕ ತುಂಬುತ್ತಾರೆ. ಪ್ರತಿ ದಿನದ ಪಿಗ್ಮಿ ಹಣ ಎಷ್ಟು ಎಂದು ನಿಖರವಾಗಿ ಇರುವುದಿಲ್ಲ. ಎಷ್ಟು ಪಿಗ್ಮಿ ಹಣ ತುಂಬಿದ್ದಾರೆ ಎಂಬ ಕುರಿತು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 2016 ರಿಂದ 2018 ಪಿಗ್ಮಿ ಹಣ ಪಾವತಿ ಮಾಡಿರುತ್ತಾರೆ ನಂತರ ಪಾವತಿ ಮಾಡಿರುವುದಿಲ್ಲ. ಆರೋಪಿಯು ಒಂದು ವರ್ಷದಲ್ಲಿ ಹಣ ಪಾವತಿ ಮಾಡದೆ ಇದ್ದ ಕುರಿತು ಅವರಿಗೆ ನೋಟಿಸ ನೀಡಿದ್ದಿರಾ ಎಂದರೆ ಸಾಕ್ಷಿಯು ಮೌಖಿಕವಾಗಿ ಹೇಳಿರುತ್ತೇವೆ ಮತ್ತು ನೋಟಿಸ ನೀಡಿರುತ್ತೇವೆ. 2017 ರಲ್ಲಿ ನೋಟಿಸ ನೀಡಿರುತ್ತೇವೆ. ಯಾವ ದಿನಾಂಕ ಎಂದು ನೆನಪಿಲ್ಲ. ಸದರಿ ನೋಟಿಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆನೆ. ಈ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಲವನ್ನು ದಿನಾಂಕ 25.04.2016 ರಂದು ಪಡೆದಿರುತ್ತಾರೆ. ಒಮ್ಮೆ ಸಾಲ ನೀಡಿದ ನಂತರ ಸದರಿ ಸಾಲ ಮರುಪಾವತಿ ಆಗುವವರೆಗೆ ಮತ್ತೊಂದು ಸಾಲ ನೀಡುವುದಿಲ್ಲ ಎಂದರೆ ಸರಿ. 2016 ರಲ್ಲಿಯೇ ಎರಡು ಸಾಲಗಳನ್ನು ನೀಡಿದ್ದಿರಾ ಎಂದರೆ ಸಾಕ್ಷಿಯು ಇದು ಜಿ ಪದ್ಮಾರವರ ಸಾಲ ಇರುತ್ತದೆ ಎಂದು ನುಡಿಯುತ್ತಾರೆ. ಜಿ ಪದ್ಮಾರವರ ನಮ್ಮ ಬ್ಯಾಂಕನ ಖಾತೆ ಸಂ. 1108 ಇರುತ್ತದೆ. ಈ ಕುರಿತು

ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಿ ಪದ್ಮಾರವರಿಗೆ ಸಾಲ ಮರುಪಾವತಿ ಮಾಡದೆ ಇರುವ ಕುರಿತು ನೋಟಿಸ ನೀಡಿರುತ್ತೇವೆ. ಸದರಿ ನೋಟಿಸನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಸಾಲಕ್ಕೆ ವೀರೇಶ ಮತ್ತು ದುರ್ಗಪ್ಪ ಡಂಬರರವರನ್ನು ಜಾಮೀನುದಾರಾಗಿ ಪಡೆದಿರುತ್ತೇವೆ. ಮೂರು ಜನರಿಗೂ ಸಾಲ ಬಾಕಿ ಇರುವ ಕುರಿತು ನೋಟಿಸ ನೀಡಿರುತ್ತೇವೆ. ಸದರಿ ನೋಟಿಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದುರ್ಗಪ್ಪ ಡಂಬರ ಮತ್ತು ನಾವು ಸೇರಿ ಆರೋಪಿ ವಿರುದ್ಧ ಚೆಕ್ ಬೌನ್ಸ ಪ್ರಕರಣಗಳನ್ನು ದಾಖಲಿಸಿರುತ್ತೆವೆ ಎಂದರೆ ಸರಿಯಲ್ಲ.

ಆರೋಪಿ ಮತ್ತು ಅವರ ಕುಟುಂಬದವರು ಸೇರಿ ಒಟ್ಟು 3 ಚೆಕ್‌ಗಳನ್ನು ನೀಡಿರುತ್ತಾರೆ. ಮೂರು ಸಾಲಗಳ ಕುರಿತು ಮೂರು ಚೆಕ್ ಗಳನ್ನು ನೀಡಿರುತ್ತಾರೆ. ಜಾಮೀನುದಾರರ ಚೆಕ್ ಗಳನ್ನು ಪಡೆದಿರುವುದಿಲ್ಲ. ಈ ಪ್ರಕರಣದ ಚೆಕ್ ನಂ 326262 ಇರುತ್ತದೆ. ಆರೋಪಿ ಸದರಿ ನಂಬರ ಚೆಕ್ ನೀಡಿದೆ ಇದ್ದರೂ ಈ ಕುರಿತು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಬರುವ ಪೂರ್ವದಲ್ಲಿ ಈ ಪ್ರಕರಣದಲ್ಲಿ ಎಷ್ಟು ಜನ ಸಾಕ್ಷಿ ನುಡಿದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ಚೆಕ್ ನ್ನು ಆರೋಪಿಯು ತಂದು ನೀಡಿದ್ದು ನಾವು ಬರೆದಿದ್ದು ನಂತರ ಅವರ ಸಹಿ ಮಾಡಿ ನೀಡಿರುತ್ತಾರೆ. ಆರೋಪಿಯು ಯಾವುದೆ ಚೆಕ್ ನ್ನು ನೀಡದೆ ಇದ್ದರು ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಜಾಮೀನುದಾರರ ಖಾತೆ ಸಂ. 17550010100200 ಇರುತ್ತದೆ.

ನಿಪಿ-1 ಚೆಕ್ ಗೆ ಆರೋಪಿಯು ಯಾವ ಪೆನ್ನು ನಿಂದ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನಾನು ಇರಲಿಲ್ಲ ಎಂದು ನುಡಿದಿರೂತ್ತರೆ. ನಿಪಿ-1 ನ್ನು ಯಾರ ಸಮಕ್ಷಮ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಲ ನೀಡುವ ಸಮಯದಲ್ಲಿ ಸಾಲಗಾರ ಮತ್ತು ಜಾಮೀನಿದಾರರ 2-3 ಚೆಕ್ ಗಳನ್ನುಪಡೆದು ಸಾಲ ನೀಡುತ್ತೇವೆ ಎಂದರೆ ಸರಿಯಲ್ಲ. ಅಂತಹ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೆವೆ ಎಂದರೆ ಸರಿಯಲ್ಲ.

ಆರೋಪಿಗೆ ನೀಡಿದ ನೋಟಿಸಗೆ ಜಯಶ್ರೀ ರವರು ಮಾಹಿತಿ ನೀಡಿರುತ್ತಾರೆ. ಸದರಿ ನೋಟಿಸನಲ್ಲಿ ಆರೋಪಿ ಚೆಕ್ ನೀಡಿದ್ದು ಅದು ಅಮಾನ್ಯವಾದ ಬಗ್ಗೆ ಹೇಳಿರುತ್ತೇವೆ. ಸಾಲ ವಸೂತಿಗಾಗಿ ಹೋದ ದಿನವೆ ಚೆಕ್ ನ್ನು ನೀಡಿರುವುದಿಲ್ಲ ಕೆಲವು ದಿನಗಳ ನಂತರ ನೀಡಿರುತ್ತಾರೆ. ಚೆಕ್ ನೀಡಿದ ನಂತರ ಈ ಕುರಿತು ಖಾತೆಯಲ್ಲಿ ನಮೂದಿಸುತ್ತಿರಾ ಎಂದರೆ ಸಾಕ್ಷಿಯು ಚೆಕ್ ನ ಹಣ ಜಮೆಯಾದ ನಂತರ ನಮೂದಿಸುತ್ತೇವೆ ಎಂದು ನುಡಿದಿರುತ್ತಾರೆ. ಚಕ್ ಅಮಾನ್ಯವಾದ್ದರಿಂದ ಸಾಲದ ಹಣವನ್ನು ನಗದಾಗಿ ಪಾವತಿಸುವಂತೆ ಮೌಖಿಕವಾಗಿ ಹೇಳಿರುತ್ತೇನೆ. ಚೆಕ್ ಅಮಾನ್ಯವಾದ 8 ದಿನದಲ್ಲಿ ಈ ಕುರಿತು ಹೇಳಿರುತ್ತೇವೆ. ಆಗ ಆರೋಪಿಯು ಸದ್ಯದ್ದಲೆ ಬಂ ದು ಪಾವತಿ ಮಾಡುವುದಾಗಿ ಹೇಳಿದ್ದರು. ಚೆಕ್ ಅಮಾನ್ಯವಾದ 45 ದಿನಗಳಲ್ಲಿ ನೋಟಿಸ ನೀಡಿರುತ್ತೇವೆ. ಈ ಕುರಿತು ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನನಗೆ ದೂರಿನ ಕುರಿತು ಯಾವುದೇ ಮಾಹಿತಿ ಇಲ್ಲದೆ ಇದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಬ್ಯಾಂಕಗೆ ಯಾವುದೇ ಚೆಕ್ ನೀಡದೆ ಇದ್ದರು ನಮ್ಮ ಬಳಿ ಇದ್ದ ಅವರ ಚೆಕ್ ಗಳನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆ ನೆ ಎಂದರೆ ಸರಿಯಲ್ಲ.

ಸಾಲ ಪಡೆದ ಪದ್ಮಾರವರ ವಿರುದ್ದ ವಸೂಲಾತಿಗಾಗಿ ಎ ಆರ ಸಿ ಎಸ ರವರ ಬಳಿ ಪ್ರಕರಣ ದಾಖಲಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಆರೊಪಿಯು ಈ ಚೆಕ್ ನೀಡಿದ್ದರಿಂದ ಸದರಿ ಪ್ರಕರಣ ದಾಖಲಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರತಿ ಸಾಲವನ್ನು ಚೆಕ್ ಮೂಲಕವೆ ವಸೂಲಾತಿ ಮಾಡುತ್ತೇವೆ ಎಂದರೆ ಸರಿಯಲ್ಲ. ಪ್ರತಿ ವರ್ಷ 50-60 ಚೆಕ್ ಬೌನ್ಸ ಪ್ರಕರಣಗಳನ್ನು ನ್ಯಾಯಾಲಯದಲ್ಲಿ ಮಾಡುತ್ತೇವೆ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯ ಪರವಾಗಿ ಸಾಲದ ಮರಪಾವತಿಗಾಗಿ ಎ ಆರ್ ಸಿ ಎಸ ನಲ್ಲಿ ಪ್ರಕರಣ ದಾಖಲಿಸಲು ಬರುತ್ತಿದ್ದು ಚೆಕ್ ಬೌನ್ಸ ಪ್ರಕರಣ ದಾಖಲಿಸಲು ಬರುವುದಿಲ್ಲ . ಪದ್ಮಾರವರು ಪಡೆದ ಪೂರ್ತಿ ಸಾಲವನ್ನು ಮರುಪಾವತಿ ಮಾಡಿದ್ದು ಯಾವುದೆ ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ. ಪದ್ಮಾರವರ ಸಾಲಕ್ಕೆ ಜಾಮೀನುದಾರರು ನೀಡಿದ ಚೆಕ್‌ನು ದುರ್ಬಳಿಕೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಲದ ಖಾತೆ ವಹಿಯನ್ನು ಹಾಜರುಪಡಿಸಿದ್ದಲ್ಲಿ

ಸತ್ಯಾವಂಶ ಹೊರ ಬರುತ್ತದೆ ಎಂದು ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಸಾಲದ ಮರಪಾವತಿಗಾಗಿ ಚೆಕ ನೀಡಿಲ್ಲ ಎಂದರೆ ಸರಿಯಲ್ಲ. ಆರೊಪಿಯು ಯಾವುದೆ ಬಾಕಿ ಪಾವತಿಸಲು ಬಾದ್ಯಸ್ಥರಲ್ಲಿ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ , ಪದ್ಮಾ ರವರಿಗೆ ಮತ್ತು ವಿನೋದರವರಿಗೆ ಕನ್ನಡ ಸರಿಯಾಗಿ ಓದಲು ಬರೆಯಲು ಬರುವುದಿಲ್ಲ ಮತ್ತು ಅರ್ಥವಾಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಕುಷ್ಟಗಿ**

ಸಿ ಸಿ ನಂ. ಃ 427/2023
ಪಿ.ಡಬ್ಲೂ-2